# ಮನೆಕೆಲಸಕ್ಕೆ ಬೆಲೆ ಇಲ್ಲವೆ?

ಗೃಹಿಣಿಯರ ಕೆಲಸಕ್ಕೆ ಬೆಲೆ ಕಟ್ಟಲು ಯಾರಿಂದ ಸಾಧ್ಯ? ಹಾಗೆಂದು ಇಡೀ ದಿನ ಕೆಲಸದಲ್ಲೇ ಕಳೆಯಬೇಡಿ. ನಿಮಗಾಗಿ ಸ್ವಲ್ಪ ಸಮಯ ಮಾಡಿಕೊಳ್ಳಿ.

■ **ಚೈತ್ರ ಎಲ್ ಹೆಗಡೆ**

ಗೃಹಿಣಿಯರೆಂದರೆ ಅತ್ಯಂತ ಆರಾಮದಾಯಕ ಜೀವನ. ಅವಳಿಗೆ ಕಚೇರಿಯಲ್ಲಿ ಬಾಸ್ ನ ಮಾತು ಕೇಳಬೇಕೆಂದಿಲ್ಲ, ಮ್ಯಾನೇಜರ್ ಕೊಟ್ಟಿರುವ ಟಾರ್ಗೆಟ್ ರೀಚ್ ಮಾಡಬೇಕೆಂದಿಲ್ಲ, ಸಂಬಳ ಹೆಚ್ಚಿಸಿ ಎಂದು ಕೇಳಬೇಕಾಗಿಲ್ಲ. ರಜೆ ಕೊಡಿ ಎಂದು ಗೋಗರಿಯಬೇಕಾಗಿಲ್ಲ. ಕಚೇರಿಯಲ್ಲಿ ನಡೆಯುವ ಅನ್ಯಾಯ ಸಹಿಸಿಕೊಳ್ಳಬೇಕೆಂದಿಲ್ಲ. ಮನೆಯಲ್ಲಿರುವ ಕೆಲಸವನ್ನು ಯಾವಾಗ ಬೇಕಾದರು ಮಾಡಿಕೊಂಡು, ತಮಗೆ ಬೇಕಾದ ಹಾಗೆ ಬಾಳಬಹುದು ಎಂಬುದೇ ಬಹುತೇಕರ ಅನಿಸಿಕೆ. ನಿಜಕ್ಕೂ ಪರಿಸ್ಥಿತಿ ಹಾಗಿದ್ದರೆ ಅದೆಷ್ಟು ಸುಂದರವಾಗಿರುತ್ತಿತ್ತು. ಆದರೆ, ಗೃಹಿಣಿಯರ ಪರಿಸ್ಥಿತಿ ಇದಕ್ಕಿಂತಲೂ ಭಿನ್ನ. ಪ್ರತಿದಿನವೂ ಒಂದು ಸವಾಲಾಗಿ ಎದುರು ನಿಂತಿರುತ್ತದೆ.

ಮಕ್ಕಳ ಸ್ಕೂಲ್ ಬಸ್ ಸಮಯಕ್ಕೆ ಸರಿಯಾಗಿ ತಯಾರು ಮಾಡಿಲ್ಲವಾದರೆ, ಅವರನ್ನು ಆಟೋದಲ್ಲೋ, ಕಾರ್ ನಲ್ಲೋ ಸ್ಕೂಲ್ ಗೆ ಬಿಟ್ಟು ಬರಬೇಕು. ಒಮ್ಮೆ ತಯಾರಿಸಿದ ಅಡುಗೆಗೆ ಉಪ್ಪು ಹಾಕಿಲ್ಲವಾದರೆ ಸಂಜೆ ಮನೆಯಲ್ಲಿ ಇನ್ನಿಲ್ಲದ ರಾದ್ಧಾಂತ. ಇಷ್ಟವಿಲ್ಲದ ತರಕಾರಿ ಅನ್ನದ ಮಧ್ಯೆ ಕಂಡರೂ ಬೈಗುಳ ಇದ್ದದ್ದೇ. ಹೋಗಲಿ ಅವರಿಷ್ಟದ ಅಡುಗೆ ಮಾಡಿದರೂ ಏನಾದರೂ ಒಂದು ಕೊಂಕು ಬರದೇ ಇರದು. ಹಾಗಾಗಿ ಮೊದಲ ಆದ್ಯತೆ ಇತರರಿಗೆ. ಜೊತೆಗೆ ಇತರರ ಕೆಲಸ ಸರಿಯಾದ ಸಮಯಕ್ಕೆ ಆಗದೇ ಹೋದರೆ ಬೆಲೆ ತೆರಳುವವಳು ಗೃಹಿಣಿಯೇ. ಹಾಗಾಗಿ  ಅವಳ ಕೆಲಸವೊಂದು ಬಿಟ್ಟು ಬಾಕಿ ಎಲ್ಲರ ಕೆಲಸ ಸಮಯಕ್ಕೆ ಸರಿಯಾಗಿ ನಡೆಯಲೇ ಬೇಕು. ಪೈಪೋಟಿಗೆ ಬಿದ್ದಾದರೂ ಸಮಯಕ್ಕೆ ಮೊದಲೇ ಎಲ್ಲರನ್ನು ಸಿದ್ಧಗೊಳಿಸಲೇಬೇಕು.

ತಿಂಗಳಾಂತ್ಯದವರೆಗೆ ಸಂಬಳ ಜೋಪಾನ ಮಾಡಬೇಕು. ಹೆಚ್ಚು ಬೇಡಿಕೆ ಇಡುವ ಹಾಗಿಲ್ಲ. ಏಕೆಂದರೆ ಮನೆಯ ಆರ್ಥಿಕ ಪರಿಸ್ಥಿತಿ ಅವಳಿಗಿಂತ ಚನ್ನಾಗಿ ಇನ್ನಾರೂ ಅರಿತಿರುವುದಿಲ್ಲ. ಮಕ್ಕಳು ಅದೆಷ್ಟೇ "ಬೇಕುಗಳ" ಪಟ್ಟಿ ಇಟ್ಟರೂ ಸಂಬಳ ತರುವವರೆಗೂ ಅವರನ್ನು ಸುಧಾರಿಸಬೇಕು. ಇದರ ಮಧ್ಯೆ, ಹಬ್ಬಗಳು ಬಂದರೆ ಇನ್ನಷ್ಟು ಕೆಲಸ. ದೇವರ ಮುಂದೆ ಎಲ್ಲ ಕಜ್ಜಾಯಗಳೂ ಇರಲೇಬೇಕು. ಯಾವ ನಿಯಮಗಳನ್ನೂ ಮುರಿಯುವಂತಿಲ್ಲ. ಇನ್ನು ನೆಂಟರಿಷ್ಟರು ಮನೆಗೆ ಬಂದರಂತೂ ಅವರ ಆತಿಥ್ಯದಲ್ಲಿ ಯಾವುದೇ ಕೊರತೆ ಇಲ್ಲದ ಹಾಗೆ ನೋಡಿಕೊಳ್ಳುವುದು ಅವಳದೇ ಜವಾಬ್ದಾರಿ. ಸರಿಯಾಗಿ ನೋಡಿಕೊಳ್ಳದಿದ್ದರೆ ರೆಕ್ಕೆಪುಕ್ಕಗಳ ಸಮೇತ ಮಾತು ಕೇಳಿ ಬರುತ್ತದೆ ಎಂಬುದು ಅವಳಿಗೆ ಗೊತ್ತಿರುವ ಸಂಗತಿ. ಒಟ್ಟಿನಲ್ಲಿ ಮನೆಯಲ್ಲಿ ಅದೇನೆ ಹೆಚ್ಚುವರಿ ಬಂದರೂ ಅದರ ಹೊಣೆ ಅವಳದೇ ಆಗಿರುತ್ತದೆ.

ಇನ್ನು ಶಾಲೆಗೆ ಹೋಗುವವರಿಗೆ, ಕೆಲಸಕ್ಕೆ ಹೋಗುವವರಿಗೆ ವಾರಾಂತ್ಯದಲ್ಲಿ ರಜೆ ಇದ್ದೇ ಇರುತ್ತದೆ. ಶಾಲೆಯ ಕೆಲಸದ ಹೊರತಾಗಿ ಅವರಿಗೆಂದೇ ಕೆಲ ಸಮಯವಾದರೂ ಮೀಸಲು. ಈ ಸಮಯದಲ್ಲಿ ಯಾರೂ ಕೆಲಸದ ಬಗ್ಗೆ ಯೋಚನೆಯನ್ನು ಮಾಡಲಾರರು. ಬಹುತೇಕರು ಮನೋರಂಜನೆಗೆ ಆದ್ಯತೆ ನೀಡಿದರೆ, ಇನ್ನು ಕೆಲವರು ತಮ್ಮ ವೈಯಕ್ತಿಕ ಕೆಲಸಗಳಿಗೆ ಸಮಯ ಮೀಸಲಿರಿಸುತ್ತಾರೆ. ಆದರೆ ಗೃಹಿಣಿಯರ ಕೆಲಸದ ಮಧ್ಯೆ ರಜೆಗಳು ಎಂದೂ ಬರುವುದೇ ಇಲ್ಲ. ವಾರಾಂತ್ಯದಲ್ಲಿ ಎಲ್ಲರೂ ಮನೆಯಲ್ಲಿರುವುದರಿಂದ ಬೇಡಿಕೆ ಪೂರೈಸುವುದರಲ್ಲೇ ಕಳೆದುಹೋಗುತ್ತದೆಯೇ ವಿನಹಃ ಕೆಲಸದ ಹೊರೆ ಕಡಿಮೆಯಾಗದು. ಇನ್ನು ಸಂಬಂಧಿಕರ ಮನೆಯಲ್ಲಿ ಶುಭ ಸಮಾರಂಭಗಳಿದ್ದರೂ ಮನೆಯ ಕೆಲಸದಲ್ಲಿ ರಿಯಾಯಿತಿ ಲಭಿಸದು. ಯಾರೊಬ್ಬರ ಕೆಲಸವಾಗಿಲ್ಲವಾದರೂ ಪ್ರಶ್ನೆ ಎದುರಿಸಲೇ ಬೇಕು. ಹಾಗೆಂದು ಕೆಲಸ ಮಾಡಿ ಮುಗಿಸಲಾಗುತ್ತಿಲ್ಲ, ಯಾರಾದರೂ ಕೈ ಜೋಡಿಸಬಾರದಾ ಎಂದರೆ ಎಲ್ಲರದೂ ಅವರವರದೇ ಕಾರಣಗಳು ಕೇಳಿ ಬರುತ್ತದೆ.



ಸಾಮಾನ್ಯವಾಗಿ ವಾರದ ದಿನಗಳಲ್ಲಿ ಬೆಳಗಿನ ಹೊತ್ತು ಎಲ್ಲರ ಮನೆಯಲ್ಲೂ ಸ್ಪರ್ಧೆ ಏರ್ಪಟ್ಟಿರುತ್ತದೆ. ಸ್ನಾನ ಮಾಡಲು, ತಿಂಡಿ ತಿನ್ನಲು, ದೇವರ ಮುಂದೆ ಕೈ ಜೋಡಿಸಿ ನಿಲ್ಲಲು ಸ್ಪರ್ಧೆ ಏರ್ಪಟ್ಟಿರುತ್ತದೆ.